ಹೆಗಲಲ್ಲಿ ಮಲಗಿದ್ದ ಮೊಮ್ಮಗನನ್ನು ಮತ್ತೆ ಮಂಚದ ಮೇಲೆ ಮಲಗಿಸಿದವರೆ, ತಾನು ಸ್ನಾನ ಮಾಡಿ, ತಿಂಡಿ ತಿಂದು ಮತ್ತೆ ಮೊಮ್ಮಗ ಮಲಗಿದ್ದಲ್ಲಿಗೇ ಬರುವಷ್ಟರಲ್ಲಿ ಮಗು ನಿದ್ದೆ ಹೋಗಿತ್ತು. ಜ್ವರ ಇನಿತೂ ಕಮ್ಮಿಯಾಗಿರಲಿಲ್ಲ. ಅಕ್ಷಯಕುಮಾರನು ಅವಸರವಸರವಾಗಿ ಡ್ರೆಸ್ ಮಾಡಿಕೊಂಡು ಮಲಗುವ ಕೋಣೆಯಿಂದ ಹೊರಬಂದವನೆ ಅಡುಗೆ ಕೋಣೆ ಹೊಕ್ಕು, ಊರಿಂದ ಕಳುಹಿಸಿರುವ ಎರಡು ತುಂಡು ಪತ್ರೊಡೆಯನ್ನು ತಿಂದುಬಿಟ್ಟು 'ಬರ್ತೀನಿ ಮಾಮ...' ಎಂದು ಮಾವನಿಗೆ ಹೇಳುತ್ತ ಆಫೀಸಿಗೆ ಹೊರಟೇಬಿಟ್ಟ. ಮಧ್ಯಾಹ್ನದ ಹೊತ್ತಿಗೆ ಮಗುವಿಗೆ ಜ್ವರ ಇನ್ನೂ ಏರುತ್ತಿರುವಂತೆ ರಾಮಯ್ಯ ಆಳ್ವರಿಗೆ ಅನಿಸುತ್ತಿದ್ದಂತೆ, ಅವರು ಉಟ್ಟ ಬಟ್ಟೆಯಲ್ಲೇ ಕುಮುದಳನ್ನು ಹೊರಡಿಸಿ, ಅಲ್ಲೇ ಪಕ್ಕದಲ್ಲಿ ಮೂರನೇ ಮೈನ್ ಏಳನೇ ಕ್ರಾಸ್‌ನಲ್ಲಿದ್ದ 'ಮಾನಸ ಸೂಪರ್ ಸ್ಪೆಷಾಲಿಟಿ' ಆಸ್ಪತ್ರೆಗೆ ಮಗುವನ್ನು ಕರೆತಂದಿದ್ದರು. ಮಕ್ಕಳ ವೈದ್ಯ ಡಾ. ವಿನಾಯಕ್ ಮಗುವನ್ನು ತಪಾಸಣೆ ಮಾಡಿ ಎರಡು ದಿನದ ಔಷಧ ಬರೆದುಕೊಟ್ಟು, 'ಮೂರನೇ ದಿನವೂ ಜ್ವರ ಕಮ್ಮಿಯಾಗದಿದ್ದರೆ ಮತ್ತೆ ಬನ್ನಿ... ಬ್ಲಡ್ ಟೆಸ್ಟ್ ಮಾಡ್ಬೇಕಾಗುತ್ತೆ...' ಎಂದಂದಿದ್ದರು.

ಆದರೆ ಏರಿದ್ದ ಜ್ವರ ಮೂರು ದಿನವಾದರೂ ತಗ್ಗದಿದ್ದಾಗ ಮಗುವನ್ನು ಮತ್ತೆ ಆಸ್ಪತ್ರೆಗೆ ದಾಖಲಿಸಲಾಯಿತು. 'ವೈದ್ಯರು ಮಗುವಿನ ಸ್ಥಿತಿ ಸ್ವಲ್ಪ ಗಂಭೀರ ಇದೆ, ಟ್ರೀಟ್‌ಮೆಂಟ್‌ಗೆ ಐಸಿಯುನಲ್ಲಿ ಇಡಬೇಕಾಗುತ್ತೆ' ಎಂದಾಗ ಕುಮುದ ಅಲ್ಲೇ ಧೈರ್ಯಗೆಟ್ಟು ಕುಸಿದು ಕೂತುಬಿಟ್ಟಿದ್ದಳು. ರಾಮಯ್ಯ ಆಳ್ವರೂ ಕೂಡಾ ಅಷ್ಟೇ ದುಃಖಿತರಾಗಿದ್ದರು.

ಮೂರು ದಿನಗಳ ನಂತರದಲ್ಲಿ ಮಗುವನ್ನು ಐಸಿಯುನಿಂದ ಸ್ಪೆಷಲ್ ವಾರ್ಡ್‌ಗೆ ಶಿಫ್ಟ್ ಮಾಡಿದಾಗ – ಮಗು ಕಿತ್ತೆಸೆದ ಸೋರೆಕ್ಕಾ ಬಳ್ಳಿಯಂತಾದುದನ್ನು ಕಂಡು ಕುಮುದ ಇನ್ನಿಲ್ಲದಂತೆ ಮುಖಕ್ಕೆ ಸೆರಗು ಒತ್ತಿಟ್ಟು ಬಿಕ್ಕಿದ್ದಳು; ಇದೆಲ್ಲವನ್ನೂ ಗಮನಿಸುತ್ತಿದ್ದ ಅಪ್ಪ ಅಕ್ಷಯಕುಮಾರನೂ ಹನಿಗಣ್ಣಾಗಿದ್ದನು. ಮಗು ಸೀರಿಯಸ್ ಇದೆ ಎಂಬ ಸುದ್ದಿ ಕೇಳಿ ಮೈಸೂರು, ಮಂಗಳೂರಿನಿಂದ ಓಡಿಬಂದ ಕುಮುದಳ ಅಣ್ಣ ತಮ್ಮಂದಿರೆಲ್ಲ ಕುಮುದಳಿಗೆ ಧೈರ್ಯ ಹೇಳುತ್ತಿದ್ದರೂ ಆಕೆಯೊಳಗೆ ಧೈರ್ಯವೆಂಬುದು ತುಂಬುತ್ತಿಲ್ಲ.

**(ಉಳಿದ ಭಾಗ ಮುಂದಿನ ಸಂಚಿಕೆಗೆ)**


**ಎಚ್. ನಾಗವೇಣಿ**

ದಕ್ಷಿಣ ಕನ್ನಡ ಜಿಲ್ಲೆಯ ದಟ್ಟ ಸಾಮಾಜಿಕ, ಸಾಂಸ್ಕೃತಿಕ ವಿವರಗಳೊಂದಿಗೆ ಬರೆಯುವ ನಾಗವೇಣಿ ಮಂಗಳೂರಿನ ಹೊನ್ನಕಟ್ಟೆಯವರು. ಅವರ 'ಗಾಂಧಿ ಬಂದ' ಕಾದಂಬರಿ ಕನ್ನಡದ ಮಹತ್ವದ ಕಾದಂಬರಿಗಳಲ್ಲೊಂದು.

'ನಾಕನೇ ನೀರು', 'ಮೀಯುವ ಆಟ' ಎಂಬ ಕಥಾಸಂಗ್ರಹಗಳನ್ನು, 'ವಸುಂಧರೆಯ ಗ್ಯಾನ', 'ಸೂರ್ಯನಿಗೊಂದು ವೀಳ್ಯ' ಎಂಬ ಪ್ರಬಂಧ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ನಾಗವೇಣಿ, ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕರಾಗಿ ಕೆಲಸ ಮಾಡುತ್ತಿದ್ದಾರೆ.